ವಿವಿಧ ಪ್ರಭೇದದ 24 ಬಗೆಯ ಚಿಟ್ಟೆಗಳ ಕಲರವ

ದೊರೆಕೆರೆ ಈಗ ಬಣ್ಣದ ಚಿಟ್ಟೆಗಳ ತಾಣ!

■ ಬಿ.ಎನ್.ಧನಂಜಯ ಬೆಂಗಳೂರು
dhananjaya.gowda@timesgroup.com

ನಗರದ ಉತ್ತರಹಳ್ಳಿಯಲ್ಲಿರುವ ದೊರೆಕೆರೆಯಲ್ಲಿ ವಿವಿಧ ಪ್ರಭೇದದ 24 ಬಗೆಯ ಚಿಟ್ಟೆಗಳು ಕಂಡು ಬಂದಿರುವುದನ್ನು ಆಕ್ಷನ್ ಏಡ್ ಅಸೋಸಿಯೇಷನ್ ದಾಖಲಿಸಿದೆ.

ನಿರಂತರ ಮತ್ತು ವೇಗದ ಅಭಿವೃದ್ಧಿಗೆ ತೆರೆದುಕೊಂಡಿರುವ ನಗರದಲ್ಲಿ ಮಾಲಿನ್ಯ ಹೆಚ್ಚುತ್ತಿದ್ದು, ಕೆರೆಗಳು ಮತ್ತು ಹಸಿರು ಪರಿಸರ ಕ್ಷೀಣಿಸುತ್ತಿದೆ. ಜೀವಸಂಕುಲಗಳು ನಲುಗುತ್ತಿವೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಇದರ ನಡುವೆಯೂ ದೊರೆಕೆರೆಯಲ್ಲಿ 24 ಬಗೆಯ ಚಿಟ್ಟೆಗಳು ಕಂಡು ಬಂದಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಪರಿಸರ ವ್ಯವಸ್ಥೆಯಲ್ಲಿ ಚಿಟ್ಟೆಗಳು ಪ್ರಮುಖ ಪಾತ್ರವಹಿಸಿವೆ. ಕೀಟ ನಿಯಂತ್ರಣಕ್ಕೆ ಸಹಕಾರಿಯಾಗಿವೆ. ಚಿಟ್ಟೆಗಳು ಹೂವಿನಿಂದ ಹೂವಿಗೆ ಹಾರಾಡಿ ಮಕರಂದ ಹೀರುತ್ತಾ ಪರಾಗಸ್ಪರ್ಶಕ್ಕೆ ನೆರವಾಗುತ್ತವೆ. ಚಿಟ್ಟೆಗಳ ಸ್ಪರ್ಶ ತಂತುಗಳು ಬಹುದೂರದ ಹೂವಿನ ಸುವಾಸನೆ ಗ್ರಹಿಸುತ್ತವೆ. ಇಂತಹ ವಿಸ್ಮಯಕಾರಿ ಚಿಟ್ಟೆಗಳ ಸಂರಕ್ಷಣೆ ಮತ್ತು ಮಹತ್ವದ ಬಗ್ಗೆ ಮಕ್ಕಳಿಗೆ ತಿಳಿಸುವ ಉದ್ದೇಶದಿಂದ ಆಕ್ಷನ್ ಏಡ್ ಅಸೋಸಿಯೇಷನ್ ದೊರೆಕೆರೆಯಲ್ಲಿ ಮೊದಲ ಹಂತದ ಸಮೀಕ್ಷೆ ನಡೆಸಿದೆ. ಪರಿಸರ ತಜ್ಞರು, ವಿಜ್ಞಾನದ ವಿದ್ಯಾರ್ಥಿಗಳು ಮತ್ತು ಆಸಕ್ತ ಮಕ್ಕಳೂ ಸೇರಿದಂತೆ 20 ಮಂದಿ ಸಮೀಕ್ಷಾ ತಂಡದಲ್ಲಿದ್ದರು.



ಯಾವ ಚಿಟ್ಟೆ ಪತ್ತೆ?

ಸ್ವಾಲ್ಲೋಟೈಲ್ಸ್, ಕಾಮನ್ ಜೇ, ಲೆಮನ್ ಎಮಿಗ್ರೇಂಟ್, ಮೊಟಿಲ್ಡ್ ಎಮಿಗ್ರೇಂಟ್, ಕಾಮನ್ ಗ್ಯಾಸ್ ಎಲ್ಫೋ, ಪಯೋನೀರ್, ಕಾಮನ್ ಕ್ರೋ, ಕಾಮನ್ ಲೆಪರ್ಡ್ ಸೇರಿ ಹಲವು ಚಿಟ್ಟೆ ಪತ್ತೆಯಾಗಿವೆ.



ದೊರೆಕೆರೆಯಲ್ಲಿನ ಜೀವ ವೈವಿಧ್ಯತೆ ದಾಖಲಿಸುವ ಕಾರ್ಯ ಮುಂದುವರಿಯಲಿದೆ. ಮತ್ತೊಂದು ಹಂತದಲ್ಲಿ ಚಿಟ್ಟೆಗಳ ಸಮೀಕ್ಷೆ ನಡೆಸಲಾಗುವುದು. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು, ಯುವಕರು, ಆಸಕ್ತ ಮಕ್ಕಳನ್ನು ತೊಡಗಿಸಿಕೊಂಡು ಪರಿಸರ, ಜೀವ ವೈವಿಧ್ಯತೆ ಮತ್ತು ಕೆರೆ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಗುವುದು.

-ರಾಘವೇಂದ್ರ ಬಿ.ಪಚ್ಚಾಪುರ ಸೀನಿಯರ್ ಪ್ರಾಜೆಕ್ಟ್ ಲೀಡರ್, ಆಕ್ಷನ್ ಏಡ್ ಅಸೋಸಿಯೇಷನ್

ದೊರೆಕೆರೆಯಲ್ಲಿಯೇ ಏಕೆ ಸಮೀಕ್ಷೆ ?

ವೃಷಭಾವತಿ ಕಣಿವೆಯ ಭಾಗವಾಗಿರುವ ದೊರೆಕೆರೆಯ ನೀರಿನ ಗುಣಮಟ್ಟ ಯೋಗ್ಯವಾಗಿಲ್ಲದಿದ್ದರೂ, ಕೆರೆಯ ವಾತಾವರಣ ಜೀವ ಸಂಕುಲಗಳಿಗೆ ಅನುಕೂಲಕರವಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಜೀವ ವೈವಿಧ್ಯತೆ ದಾಖಲಿಸಿ, ಆ ವರದಿಯನ್ನು ಬಿಬಿಎಂಪಿ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ನೀಡಲು ಆಕ್ಷನ್ ಏಡ್ ಅಸೋಸಿಯೇಷನ್ ನಿರ್ಧರಿಸಿದೆ. ಕಳೆದ ತಿಂಗಳು ಪಕ್ಷಿಗಳ ಸಮೀಕ್ಷೆ ಕೈಗೊಂಡು 48 ಪಕ್ಷಿ ಪ್ರಭೇದಗಳನ್ನು ಗುರುತಿಸುವ ಕೆಲಸವನ್ನು ಆಕ್ಷನ್ ಏಡ್ ಮಾಡಿತ್ತು. ಅದರ ಮುಂದುವರಿದ ಭಾಗವಾಗಿ ಪರಿಸರ ತಜ್ಞ ಉಲ್ಲಾಸ್ ಆನಂದ್ ನೇತೃತ್ವದಲ್ಲಿ ಮೊದಲ ಹಂತದ ಚಿಟ್ಟೆಗಳ ಸಮೀಕ್ಷೆ ನಡೆಸಿದೆ. ಇನ್ನೊಂದು ಹಂತದಲ್ಲಿ ಈ ಸಮೀಕ್ಷೆ ಮುಂದುವರೆಯಲಿದೆ. ಅಲ್ಲದೆ, ಜೇಡಗಳ ಸಮೀಕ್ಷೆಯೂ ನಡೆಯಲಿದ್ದು, ಅಂತಿಮವಾಗಿ ಒಟ್ಟಾರೆ ವರದಿಯನ್ನು ಬಿಬಿಎಂಪಿ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಸಲ್ಲಿಸುವ ಮೂಲಕ ಜೀವ ವೈವಿಧ್ಯತೆಯ ವೈಶಿಷ್ಟ್ಯಗಳನ್ನು ಹೊಂದಿರುವ ದೊರೆಕೆರೆ ಸಂರಕ್ಷಣೆಗೆ ಅಗತ್ಯ ಕ್ರಮಗಳನ್ನು ರೂಪಿಸುವಂತೆ ಮನವಿ ಮಾಡಲಿದೆ.

09-10-2023
V-karanataka Pg 07

ಜೀರಿಗೆ ಮೆಣಸಿಗೆ ದಾಖಲೆ ಬೆಲೆ

ಕೆ.ಜಿಗೆ ₹1,500 ದರ, ಇಳುವರಿ ಗಣನೀಯವಾಗಿ ಇಳಿಕೆ

● ಎಚ್.ಎನ್. ಸತೀಶ್ ಜೈನ್

ಬಾಳೆಹೊನ್ನೂರು (ಚಿಕ್ಕಮಗಳೂರು ಜಿಲ್ಲೆ): ಮಲೆನಾಡು ಭಾಗದಲ್ಲಿ ಬೆಳೆಯುವ ಅತಿ ಹೆಚ್ಚು ಖಾರ ಹೊಂದಿರುವ ಜೀರಿಗೆ ಮೆಣಸಿಗೆ (ಗಾಂಧಾರಿ ಮೆಣಸು) ಇದೇ ಮೊದಲ ಬಾರಿಗೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹1,500 ದಾಖಲೆ ಬೆಲೆ ಬಂದಿದೆ.

ಇಂಗ್ಲಿಷ್‌ನಲ್ಲಿ 'ಬರ್ಡ್ ಐ ಚಿಲ್ಲಿ' ಎಂದು ಕರೆಯಲಾಗುವ ಈ ಮೆಣಸಿಗೆ ಈಗ ಎಲ್ಲಿಲ್ಲದ ಬೇಡಿಕೆ. ಹಪ್ಪಳ, ಉಪ್ಪಿನಕಾಯಿ, ಕಷಾಯ, ಸಾಂಬಾರಿನಲ್ಲಿ ಬಳಸಲಾಗುತ್ತದೆ. ಗರಿಷ್ಠ ಔಷಧ ಗುಣ ಹೊಂದಿರುವ ಈ ಮೆಣಸನ್ನು ಹಣ್ಣಾದಾಗ ಕೊಯ್ದು ಒಣಗಿಸಿ ಮಾರಾಟ ಮಾಡಲಾಗುತ್ತದೆ. ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರದಿಂದಲೂ ಬೇಡಿಕೆ ಇದೆ.

ಜೀರಿಗೆ ಮೆಣಸಿಗೆ ಕೆ.ಜಿಗೆ ಸಾಮಾನ್ಯವಾಗಿ ₹600 ರಿಂದ ₹800ರ ಆಸುಪಾಸಿನಲ್ಲಿ ದರ ಇರುತ್ತಿತ್ತು. ಆದರೆ, ಈ ಬಾರಿ ಮಳೆ ಕೊರತೆಯಿಂದಾಗಿ



ಜೀರಿಗೆ ಮೆಣಸು

ಬೆಳೆ ನಾಶವಾಗಿದ್ದು, ಇಳುವರಿ ಕುಂಠಿತವಾಗಿದೆ. ತೋಟಗಳಲ್ಲಿ ಕಳೆನಾಶಕ ಸಿಂಪಡಣೆ, ಯಂತ್ರಗಳ ಸಹಾಯದಿಂದ ಕಳೆ ತೆಗೆಯುವ ಸಂದರ್ಭದಲ್ಲಿ ಮೆಣಸಿನ ಗಿಡಗಳು ನಾಶವಾಗಿದೆ. ಕಳಸ, ಶೃಂಗೇರಿ, ಕೊಪ್ಪ, ಜಯಪುರದ ಮಾರುಕಟ್ಟೆಯಲ್ಲಿ ಈ ಹಿಂದೆ ತಿಂಗಳಿಗೆ ಕ್ವಿಂಟಲ್‌ಗಟ್ಟಲೆ ಸಂಗ್ರಹವಾಗುತ್ತಿದ್ದ ಗಾಂಧಾರಿ ಮೆಣಸು ಈ ವರ್ಷ ಕೆ.ಜಿ. ಲೆಕ್ಕಕ್ಕೆ ಇಳಿದಿದೆ.

ಕೊಡಗು ಜಿಲ್ಲೆಯಲ್ಲೂ ಸ್ವಲ್ಪ ಪ್ರಮಾಣದಲ್ಲಿ ಗಾಂಧಾರಿ ಮೆಣಸು ಬೆಳೆಯಲಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾಳೆಹೊನ್ನೂರು ಅತಿ ದೊಡ್ಡ ಮಾರುಕಟ್ಟೆಯಾಗಿದ್ದು ಹಾವೇರಿ, ಸಕಲೇಶಪುರ, ಶಿರಸಿ, ಆಂಧ್ರಪ್ರದೇಶದಿಂದ ವ್ಯಾಪಾರಿಗಳು ಬಂದು ಇಲ್ಲಿಂದ ಮೆಣಸು ಖರೀದಿಸುತ್ತಾರೆ. ಕೇರಳ, ತಮಿಳುನಾಡಿನಿಂದಲೂ ಸಣ್ಣ ವ್ಯಾಪಾರಿಗಳೂ ಜೀರಿಗೆ ಮೆಣಸು ತಂದು, ಇಲ್ಲಿನ ಸಗಟು ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ.

'ಬಾಳೆಹೊನ್ನೂರಿನಿಂದ ವಿವಿಧ ರಾಜ್ಯಗಳಿಗೆ ಹಾಗೂ ರಾಜ್ಯದೊಳಗೆ ವರ್ಷಕ್ಕೆ ಸುಮಾರು 80 ರಿಂದ 90 ಕ್ವಿಂಟಲ್‌ನಷ್ಟು ಜೀರಿಗೆ ಮೆಣಸು ಮಾರಾಟವಾಗುತ್ತದೆ. ಆದರೆ, ಈ ಬಾರಿ ಮಾರುಕಟ್ಟೆಯಲ್ಲಿ ಈ ಮೆಣಸಿನ ತೀವ್ರ ಕೊರತೆ ಇರುವುದಿಂದ ಬೆಲೆಯಲ್ಲಿ ಏರಿಕೆಯಾಗಿದೆ. ಉತ್ತರ ಭಾರತದಲ್ಲಿ ಗಣೇಶ ಹಬ್ಬದಿಂದ ದೀಪಾವಳಿ ಹಬ್ಬದ ಅವಧಿಯಲ್ಲಿ ಈ ಮೆಣಸಿಗೆ ಹೆಚ್ಚು ಬೇಡಿಕೆ ಇರುತ್ತದೆ. ನಂತರ ದರ ಸರಾಸರಿ ಮಟ್ಟಕ್ಕೆ ಇಳಿಯುತ್ತದೆ' ಎನ್ನುತ್ತಾರೆ ಪಟ್ಟಣದ ಜೀರಿಗೆ ಮೆಣಸಿನ ವ್ಯಾಪಾರಿ ನಯಾಜ್ ಅಹಮ್ಮದ್.

09-10-2023
Prajavani Pg 2B

For more information visit
University Library Website
Web - uasbagrilibindia.org
E-mail- librarian@uasbangalore.edu.in

ಬರ ಪರಿಹಾರ ನಿರೀಕ್ಷೆ ಹೆಚ್ಚಳ

ಕೇಂದ್ರ ತಂಡ ಸಲ್ಲಿಸಬೇಕಿದೆ ಪ್ರಾಮಾಣಿಕ ವರದಿ

ಬರ ಅಧ್ಯಯನಕ್ಕೆ ಕೇಂದ್ರದಿಂದ ರಾಜ್ಯಕ್ಕೆ ಬಂದ 10 ಸದಸ್ಯರ ತಂಡ ಮೂರು ದಿನಗಳ ಪ್ರವಾಸ ಮುಗಿಸಿದೆ. ಆಯ್ದ ಕೆಲವು ಜಿಲ್ಲೆಗಳಿಗೆ ಭೇಟಿ ನೀಡಿ ಬರದ ತೀವ್ರತೆ ಕುರಿತ ಅಧ್ಯಯನ ಮಾಡಿದೆ. ಮಳೆಯಿಲ್ಲದೆ ಒಣಗಿದ ಜಮೀನುಗಳಿಗೆ ಭೇಟಿ ನೀಡಿದ ತಜ್ಞರ ಮುಂದೆ ದೈನ್ಯತೆಯಿಂದ ಕೈಮುಗಿದು ನಿಂತ ಬಡ ರೈತರು, ಸೂಕ್ತ ಪರಿಹಾರಕ್ಕಾಗಿ ಮೊರೆ ಇಟ್ಟಿದ್ದಾರೆ. ಇದಕ್ಕೂ ಮೊದಲೇ ರಾಜ್ಯ ಸರಕಾರ ಅಧಿಕೃತ ಮನವಿ ಸಲ್ಲಿಸಿದ್ದಾಗಿದೆ. ಬರ ಘೋಷಣೆಗೆ 60% ಮಳೆ ಕೊರತೆ ಇರಬೇಕು ಎಂಬ ನಿಯಮ ಇದೆ. ರಾಜ್ಯದಲ್ಲಿ ಮುಂಗಾರು ಕೊರತೆ ಈ ಮಾನದಂಡವನ್ನು ಮೀರಿ ಹೋಗಿದೆ. ಹಿಂಗಾರು ಕೂಡ ಮಂಡಿಯೂರಿ ಕುಳಿತಿದೆ. ಜುಲೈನಲ್ಲಿ ತಡವಾಗಿ ಬಂದ ಅಲ್ಪಸ್ವಲ್ಪ ಮಳೆಗೆ ಬಿತ್ತನೆ ಮಾಡಿದ ಬೀಜ ಕೂಡ ಫಲ ಕಾಣದಾಗಿದೆ. ಬಹುಪಾಲು ರಾಜ್ಯ ಬರಪೀಡಿತ. 195 ತಾಲೂಕುಗಳಲ್ಲಿ ಬರ ಆವರಿಸಿದ ಬಗ್ಗೆ ಕೇಂದ್ರಕ್ಕೆ ಸಲ್ಲಿಸಿದ ವರದಿಯಲ್ಲಿ ರಾಜ್ಯ ಮನವರಿಕೆ ಮಾಡಿಕೊಟ್ಟಿದೆ. ಇನ್ನೂ 15 ತಾಲೂಕಿಗಳನ್ನು ಇನ್ನೊಂದು ವಾರದಲ್ಲಿ ಬರ ಪೀಡಿತ ಎಂದು ಘೋಷಿಸುವುದಾಗಿ ರಾಜ್ಯ ಸರಕಾರ ತಿಳಿಸಿದೆ. 30 ತಾಲೂಕು ಹೊರತುಪಡಿಸಿದರೆ ಉಳಿದೆಲ್ಲ ಕಡೆಯೂ ಮಳೆ ಕೊರತೆಯಾಗಿದೆ. ಈ ಸಾಲಿಗೆ 30 ಸಾವಿರ ಕೋಟಿ ರೂ. ಬೆಳೆ ಹಾನಿ ಉಂಟಾಗಲಿದೆ ಎಂದು ಸರಕಾರ



ಅಂದಾಜು ಮಾಡಿದೆ. ಇದರಲ್ಲಿ 4,860 ಕೋಟಿ ರೂ.ಗಳ ಪರಿಹಾರವನ್ನು ಕೇಂದ್ರದಿಂದ ಬಯಸಲಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಅಡಿಯಲ್ಲಿ ಈ ಪರಿಹಾರ ನೀಡಿ ಎಂದು ರಾಜ್ಯ ಸರಕಾರ ಕೇಳಿಕೊಂಡಿರುವುದು ಸರಿಯಿದೆ. ಆದರೆ, ಈಗಾಗಲೇ ಎನ್‌ಡಿಆರ್‌ಎಫ್ ಅಡಿಯಲ್ಲಿ ರಾಜ್ಯಕ್ಕೆ ಮೀಸಲಿದ್ದ ಮೊತ್ತದಲ್ಲಿ 1200 ಕೋಟಿ ರೂ. ಬಳಸಿಕೊಳ್ಳಲಾಗಿದೆ. ಬರ ಅಧ್ಯಯನ ತಂಡದ ವರದಿ ಆಧರಿಸಿ ಕೇಂದ್ರ ಪರಿಹಾರ ನೀಡುವಾಗ ಬಳಕೆಯಾದ ಈ ಮೊತ್ತವನ್ನು ಪರಿಗಣಿಸುವ ಸಾಧ್ಯತೆ ಸ್ಪಷ್ಟವಾಗಿದೆ. ಆದ್ದರಿಂದ ಕೇಳಿದ ಮೊತ್ತದಲ್ಲಿ ಎಳೆದುತೂಗಿ ಸಿಗುವ ಮೊತ್ತ ಎಷ್ಟು ಎನ್ನುವುದು ಯಕ್ಷಪ್ರಶ್ನೆ. ಎನ್‌ಡಿಆರ್‌ಎಫ್ ಅಡಿ ರಾಜ್ಯಕ್ಕೆ ಮೀಸಲಾದ ನಿಧಿಯಲ್ಲಿ 20% ಪ್ರಕೃತಿ ವಿಕೋಪ ನಿರ್ವಹಣೆಗಾಗಿಯೇ ಕಾಯ್ದಿಡಲಾಗುತ್ತದೆ. ಈ ಮೊತ್ತವನ್ನೂ ಕಳೆದರೆ ರಾಜ್ಯಕ್ಕೆ ಬರುವ ಬರ ಪರಿಹಾರ ಎಷ್ಟೋ ಏನೋ ಎನ್ನುವ ಕಳವಳ ಮೂಡಿದೆ. ಇದೇನೇ ಇದ್ದರೂ ಪರಿಸ್ಥಿತಿ ಮಿದ್ದು ಕಂಡ ತಜ್ಞರ ತಂಡ ತಾರತಮ್ಯಕ್ಕೆ ಆಸ್ಪದ ಇಲ್ಲದ ರೀತಿಯ ವರದಿ ನೀಡಬೇಕಿದೆ. ಇದಕ್ಕೂ ಮಿಗಿಲಾಗಿ ಬರೀ ಕೇಂದ್ರದ ನೆರವನ್ನು ನೆಚ್ಚಿಕೊಳ್ಳದೇ ತ್ವರಿತ ಪರಿಹಾರ ಕ್ರಮಗಳನ್ನು ರಾಜ್ಯ ಸರಕಾರ ಆರಂಭಿಸಬೇಕಿದೆ.

09-10-2023
V-karnataka Pg 02

ಹದಿಮೂರು ವರ್ಷಗಳಿಂದ ರೇಷ್ಮೆ ಇಲಾಖೆಗೆ ನಡೆದಿಲ್ಲ ನೇಮಕಾತಿ

ಮಂಜೂರು 4299, ಖಾಲಿ 3014

■ ಗಂಗಾಧರ್ ಬೈರಾಪಟ್ಟಣ ರಾಮನಗರ

ದೇಶದಲ್ಲೇ ಅತಿ ಹೆಚ್ಚು ರೇಷ್ಮೆ ಬೆಳೆಯುವ ರಾಜ್ಯ ಕರ್ನಾಟಕದಲ್ಲಿ ರೇಷ್ಮೆ ಇಲಾಖೆಗೆ ಗರ ಬಡಿದಿದ್ದು, ಸಿಬ್ಬಂದಿ ಕೊರತೆಯಿಂದ ರೇಷ್ಮೆ ಕೃಷಿಯನ್ನೇ ನಂಬಿರುವ ಲಕ್ಷಾಂತರ ಕುಟುಂಬದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ವಿಶ್ವದಲ್ಲಿಯೇ ರೇಷ್ಮೆ ಉತ್ಪಾದನೆಯಲ್ಲಿ ಚೀನಾ ನಂತರದ ಸ್ಥಾನವನ್ನು ಭಾರತ ಪಡೆದುಕೊಂಡಿದೆ. ಕರ್ನಾಟಕ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಆದರೆ, ಶೇ.75 ಸಿಬ್ಬಂದಿ ಕೊರತೆ ಹಾಗೂ ಇರುವ ಸಿಬ್ಬಂದಿಯೂ ಬಹುತೇಕ 55 ವರ್ಷ ದಾಟಿದವರೇ ಇರುವ ಕಾರಣ, ಚೀನಾ ದೇಶಕ್ಕೆ ಪೈಪೋಟಿ ನೀಡುವ ಯತ್ನಕ್ಕೆ ಹಿನ್ನಡೆ ಆಗುತ್ತಿದೆ.

ರಾಜ್ಯದ ರೇಷ್ಮೆ ಕೃಷಿ ಇಲಾಖೆಗೆ ಒಟ್ಟು 4,299 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ ಈಗ 3,014 ಹುದ್ದೆಗಳು ಖಾಲಿ ಉಳಿದಿವೆ. ಇವುಗಳನ್ನು ಭರ್ತಿ ಮಾಡಲು ಸರ್ಕಾರ ಹೆಚ್ಚಿನ ಗಮನ ಹರಿಸದ ಕಾರಣ, ರಾಜ್ಯದ ಪ್ರಮುಖ ಉದ್ಯೋಗದಾತ ಕ್ಷೇತ್ರವಾಗಿರುವ ರೇಷ್ಮೆ ಕೃಷಿ ಇಲಾಖೆ ಕಾರ್ಯ ಚಟುವಟಿಕೆಗೆ ಪೆಟ್ಟು ಬಿದ್ದಿದೆ. ಪ್ರಮುಖವಾಗಿ ರೈತರೊಂದಿಗೆ ಕೆಲಸ ಮಾಡಬೇಕಾದ ರೇಷ್ಮೆ ಸಹಾಯಕ ನಿರ್ದೇಶಕರು, ವಿಸ್ತರಣಾಧಿಕಾರಿಗಳು, ನಿರೀಕ್ಷಕರು, ಪ್ರದರ್ಶಕರು, ಪ್ರವರ್ತಕರ ಒಟ್ಟು 2,241 ಹುದ್ದೆಗಳು ಖಾಲಿ ಉಳಿದಿದ್ದು, ಇರುವ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಿದೆ.

ವಯಸ್ಸಾದವರ ಇಲಾಖೆ!: ರಾಜ್ಯದ ಕೀರ್ತಿ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ರೇಷ್ಮೆ ಇಲಾಖೆ ಸದ್ಯಕ್ಕೆ ವಯಸ್ಸಾದವರ ಇಲಾಖೆಯಾಗಿ ಮಾರ್ಪಟ್ಟಿದೆ. ಕಾರಣ ವೆಂದರೆ, ಕಳೆದ 13 ವರ್ಷಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ. 2010ರಲ್ಲಿ 29 ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿದ್ದು ಬಿಟ್ಟರೆ, ಇಲ್ಲಿಯವರೆಗೂ ಒಂದೇ ಒಂದು ಹುದ್ದೆಯನ್ನು ಇಲಾಖೆ ಭರ್ತಿ ಮಾಡಿಲ್ಲ. ಇದರ ಪರಿಣಾಮ ರೇಷ್ಮೆ ಇಲಾಖೆಯಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಬಹುತೇಕ ಸಿಬ್ಬಂದಿ ವಯಸ್ಸು 55 ವರ್ಷಗಳನ್ನು ದಾಟಿದೆ.

ಉದ್ಯೋಗದಾತ ಇಲಾಖೆ: ರೇಷ್ಮೆ ಇಲಾಖೆ ಉದ್ಯೋಗ ದಾತ ಇಲಾಖೆಯಾಗಿದೆ. ರೇಷ್ಮೆ ಕೃಷಿ ಹಾಗೂ ನಂತರ ಕಾರ್ಯಗಳಲ್ಲಿ ರಾಜ್ಯದ ಸುಮಾರು 12 ಲಕ್ಷ ಕುಟುಂಬ ಗಳು ನೇರವಾಗಿ ಇಲ್ಲವೇ ಪರೋಕ್ಷವಾಗಿ ತೊಡಗಿಸಿ ಕೊಂಡಿವೆ. ಅದರಲ್ಲೂ ರೇಷ್ಮೆ ಕೃಷಿ ಮತ್ತು ನಂತರದ ಗುಡಿ ಕೈಗಾರಿಕೆಯಲ್ಲಿ ಗ್ರಾಮೀಣ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಿಗಳಾಗಿದ್ದಾರೆ. ಇಂತಹ ಇಲಾಖೆ ಸಿಬ್ಬಂದಿ ಕೊರತೆಯಿಂದಾಗಿ ಹಂತ ಹಂತವಾಗಿ ಬಲ ಕಳೆದುಕೊಳ್ಳುತ್ತಿದೆ.



ಖಾಲಿ ಹುದ್ದೆಗಳ ವಿವರ

ಶ್ರೇಣಿ	ಮಂಜೂರಾತಿ	ಭರ್ತಿ	ಖಾಲಿ
ಎ	84	58	26
ಬಿ	489	183	306
ಸಿ	3182	805	2377
ಡಿ	544	239	305
ಒಟ್ಟು	4,299	1,285	3,014

ರಾಜ್ಯವೇ ಫಸ್ಟ್: ದೇಶದಲ್ಲಿ ರಾಜ್ಯವೇ ಪ್ರಥಮ ಸ್ಥಾನ ದಲ್ಲಿದೆ. ದೇಶದ ಒಟ್ಟಾರೆ ಉತ್ಪಾದನೆಯಲ್ಲಿ ಸರಾಸರಿ ಶೇ.40 ಪಾಲು ರಾಜ್ಯದ್ದೇ ಆಗಿದೆ. ದೇಶದಲ್ಲಿ ಒಟ್ಟಾರೆ 2.57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಕೃಷಿ ಮಾಡ ಲಾಗುತ್ತಿದ್ದು, ಇದರಲ್ಲಿ ರಾಜ್ಯದಲ್ಲಿಯೇ 1.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯಲಾಗುತ್ತದೆ. ನಂತರದ ಸ್ಥಾನ ಕ್ರಮವಾಗಿ ಆಂಧ್ರ ಪ್ರದೇಶ, ತಮಿಳು ನಾಡು, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳು ಹೊಂದಿವೆ. ಇನ್ನು ರಾಜ್ಯದಲ್ಲಿ ಪ್ರತಿವರ್ಷ ಸರಾಸರಿ 11,823 ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆ ಆಗುತ್ತಿದೆ.

ಹೆಚ್ಚುತ್ತಿದೆ ಪ್ರದೇಶ: ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ ಪ್ರದೇಶ ಮೊದಲು ದಕ್ಷಿಣ ಕರ್ನಾಟಕ ಭಾಗದ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಚಾಮರಾಜನಗರ, ತುಮಕೂರು ಸುತ್ತ ಮುತ್ತಲ ಪ್ರದೇಶದಲ್ಲಿ ಹೆಚ್ಚಾಗಿ ಆಗುತ್ತಿತ್ತು. ಆದರೆ ಈಗ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿಯೂ ರೇಷ್ಮೆ ಉತ್ಪಾದನೆ ಮಾಡಲಾಗುತ್ತಿದೆ.

ವಾರ್ಷಿಕ ಸುಮಾರು 8-9 ಮೆಟ್ರಿಕ್ ಟನ್ ರೇಷ್ಮೆಯನ್ನು ಚೀನಾದಿಂದಲೇ ಆಮದು ಮಾಡಿಕೊಳ್ಳ ಲಾಗುತ್ತಿದೆ. ಇದನ್ನು ಕಡಿಮೆಗೊಳಿಸಿ ದೇಶದಲ್ಲಿಯೇ ಗುಣಮಟ್ಟದ ರೇಷ್ಮೆ ಬೆಳೆಗೆ ಒತ್ತು ನೀಡಲಾಗುತ್ತಿದೆ. ಇದರಿಂದಾಗಿ ಇತ್ತೀಚೆಗೆ ಬೈವೋಲ್ಟಿನ್ ರೇಷ್ಮೆ ಬೆಳೆಯಲು ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ. ಆದರೆ ಸಿಬ್ಬಂದಿ ಕೊರತೆ ಇದಕ್ಕೆ ದೊಡ್ಡ ಹೊಡೆತ ನೀಡಿದೆ.

ಯಾವುದೇ ಸೌಲಭ್ಯ ಇಲ್ಲ: ರೇಷ್ಮೆ ಇಲಾಖೆಯಲ್ಲಿ ಒಟ್ಟು 4,299 ಮಂಜೂರಾದ ಹುದ್ದೆಗಳು ಇವೆ. ಇವುಗಳಲ್ಲಿ 1285 ಹುದ್ದೆಗಳು ಭರ್ತಿಯಾಗಿದ್ದು, 3,014 ಹುದ್ದೆಗಳು ಖಾಲಿ ಇವೆ. ಇತ್ತೀಚೆಗೆ ಇಲಾಖೆ ಪುನಾರಚನೆ ಹೆಸರಲ್ಲಿ 4,299 ಇದ್ದ ಮಂಜೂರಾತಿ ಹುದ್ದೆಗಳನ್ನು 2,695ಕ್ಕೆ ಇಳಿಕೆ ಮಾಡಲಾಗಿತ್ತು. ಆದರೆ ಇದರ ವಿರುದ್ಧ ಕೆಲವು ಸಿಬ್ಬಂದಿ ಕೋರ್ಟ್ ಮೊರೆ ಹೋದ ಕಾರಣ ಹುದ್ದೆಗಳ ಸಂಖ್ಯೆಕಡಿಮೆಯೂ ಆಗಿಲ್ಲ. ನಂತರ ನೇಮಕಾತಿಯೂ ಆಗಿಲ್ಲ, ಇರುವ ಸಿಬ್ಬಂದಿಯಲ್ಲಿ ಬಹುತೇಕರಿಗೆ ಬಡ್ತಿಯೂ ಸಿಕ್ಕಿಲ್ಲ.

ರೇಷ್ಮೆ ಇಲಾಖೆ ಲಕ್ಷಾಂತರ ಮಂದಿಗೆ ಉದ್ಯೋಗ ನೀಡಿರುವ ಕ್ಷೇತ್ರ. ಇಲಾಖೆಯನ್ನು ಬಲಗೊಳಿಸದಿದ್ದರೆ ಖಂಡಿತವಾಗಿ ಬೇಡಿಕೆಗೆ ತಕ್ಕಂತೆ ಉತ್ಪಾದನೆ ಮಾಡಲು ಸಾಧ್ಯವಿಲ್ಲ. ಇಲಾಖೆ ಮುಚ್ಚಿದರೆ ಗ್ರಾಮೀಣ ಭಾಗದ ಲಕ್ಷಾಂತರ ಕುಟುಂಬಗಳ ಬದುಕು ಬೀದಿಗೆ ಬೀಳುತ್ತದೆ. ಸರ್ಕಾರ ಖಾಲಿ ಇರುವ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಬೇಕು.

| ಕೆ.ರವಿ ಕಾರ್ಯದರ್ಶಿ, ರೇಷ್ಮೆ ಬೆಳೆಗಾರರ ಹಿತ ರಕ್ಷಣಾ ಸಮಿತಿ ರಾಮನಗರ

09-10-2023
Vijayavani Pg 2B

ಸಾಂಪ್ರದಾಯಿಕವಾಗಿ ರೇಷ್ಮೆ ಬೆಳೆಯುವ ಪ್ರದೇಶದಲ್ಲಿ ಹೆಚ್ಚಿನ ಸಿಬ್ಬಂದಿ ಅಗತ್ಯವಿದೆ. ಇದರ ಹೊರತಾಗಿ ಬೇರೆ ಕಡೆಗಳಲ್ಲಿ ಸಿಬ್ಬಂದಿ ಕೊರತೆ ಇಲ್ಲ. ರಾಮನಗರ ಮತ್ತು ಶಿಡ್ಲಘಟ್ಟ ರೇಷ್ಮೆ ಮಾರುಕಟ್ಟೆಯಲ್ಲಿನ ಸಿಬ್ಬಂದಿ ಕೊರತೆ ನೀಗಿಸಲು ಸಚಿವರು ಗಮನ ಹರಿಸಿದ್ದು ಅತಿ ಶೀಘ್ರವೇ ಪರಿಹಾರ ಸಿಗಲಿದೆ.

| ಎಂ.ಬಿ. ರಾಜೇಶ್‌ಗೌಡ ಆಯುಕ್ತರು, ರೇಷ್ಮೆ ಇಲಾಖೆ